ಸುತ್ತಿಕೊಂಡು ಯಾವ ಅಂಕೆಯಿಲ್ಲದೆ ಇರುವ ಸಹಜ ಜೀವಿಯಾಗಿ ನೋಡಿದ್ದಾರೆ. ಬಾಬಾಗಳು, ಅಘೋರಿಗಳು ಅಂತ ದೊಡ್ಡ ಹಿಂಬಾಲಕರ ದಂಡೆ ಇದೆ ಅವನಿಗೆ...' ಹೇಳಿದವ ತಟ್ಟನೆ ನಗತೊಡಗಿದ. ಯಾಕೆ ಎಂಬಂತೆ ಅವನ ಮುಖ ನೋಡಿದಳು.

'ಅಜ್ಜ ಹೇಳುತ್ತಿದ್ದರು. ಈ ಊರಲ್ಲೇ ಇಬ್ಬರು ಪುರೋಹಿತರಿದ್ರಂತೆ. ಬಹಳ ಸ್ನೇಹಿತರು. ಬೇಸಿಗೆಯ ಒಂದು ರಾತ್ರಿ ನಿದ್ದೆ ಬಂದಿಲ್ಲ. ಇಬ್ಬರೂ ಅರಳಿಕಟ್ಟೆ ಮೇಲೆ ಕುಳಿತು ಸುದ್ದಿ ಹೇಳಿಕೊಳ್ಳುತ್ತಾ ಭಂಗಿ ಸೇದಿದ್ರಂತೆ. ಎಷ್ಟೊ ಹೊತ್ತಾದ ಮೇಲೆ, ಬಹಳ ರಾತ್ರಿಯಾಯ್ತು ಹೋಗೋಣ ಅಂತ ಎದ್ದರಂತೆ. ಆಗ ಒಬ್ಬ ಪುರೋಹಿತ್ರು 'ನೀನು ಒಬ್ಬೇ ಆಗತೀಯಲ್ಲ ಇರೋ, ನಿಮ್ಮನೆವರೆಗೆ ಕಳಿಸಿ ಹೋಗುತೇನೆ' ಅಂತ ಅವರ ಮನೆ ತನಕ ಹೋದರು. ಅಲ್ಲಿ ಅವರು 'ನೀನು ಒಬ್ಬೆ ಆಗತೀಯಲ್ಲಪ, ನಾನು ನಿಮ್ಮನೆ ತನಕ ಬರತೇನೆ' ಅಂತ ಇವರ ಮನೆಗೆ ಜೊತೆಯಲ್ಲಿ ಬಂದರು. ಹೀಗೆ ಭಂಗಿ ಅಮಲಿನಲ್ಲಿ, ಕಳಿಸಿ ಬರೋ ಕೆಲಸ ಬೆಳಗಾದರೂ ನಡೀತಾನೆ ಇತ್ತಂತೆ' ಅವನ ವಿವರಣೆ ಕೇಳಿ ಬಿದ್ದು ಬಿದ್ದು ನಗತೊಡಗಿದಳು.

'ನಾನು ಹೋದ ವರ್ಷ ಅಮರನಾಥ ಯಾತ್ರೆಗೆ ಹೋಗಿದ್ದೆ. ಪಂಜಾಬ್ ಹರಿಯಾಣ, ಜಮ್ಮುಕಾಶ್ಮೀರ ಎಲ್ಲಾಕಡೆ ಊರೂರಿನಲ್ಲು, ರಸ್ತೆಯುದ್ದಕ್ಕು ಅಲ್ಲಲ್ಲಿ ಡೇರೆಗಳು. 'ಭಂಡಾರಾ' ಅಂತ ಡೇರೆಗೆ ಬೋರ್ಡು. ಯಾತ್ರಿಗಳ ವಾಹನಗಳನ್ನ ನಿಲ್ಲಿಸಿ ಕರೆದು, ಊಟ ಸ್ವೀಕರಿಸುವಂತೆ ವಿನಂತಿ ಮಾಡತಿದ್ರು. ಒಂದು ಸಂಗತಿ ಗೊತ್ತಾ? ಅಲ್ಲೆಲ್ಲ ಬೃಹದಾಕಾರದ ಕಟೌಟು. ಅದರಲ್ಲಿ ಚಿಲುಮೆ ಹಿಡಿದು ಭಂಗಿ ಸೇವಿಸುತ್ತ ತನ್ಮಯನಾಗಿರುವ ಶಿವನ ಫೋಟೊ. ಅಂದರೆ ಭಂಗಿಯನ್ನ ಶಿವನ ಪ್ರಸಾದವಾಗಿ ಸ್ವೀಕರಿಸಿ, ಅಪಾವಿತ್ರ್ಯದ ಹಿಡಿತದಿಂದ ತಪ್ಪಿಸಿ ತಾವೂ ಉಪಯೋಗಿಸಲು ಅನುವು ಮಾಡಿಕೊಂಡರು.'

'ಬೀಡಿ ಸಿಗರೇಟಿಗಿಲ್ಲ ಆ ಭಾಗ್ಯ!' ನಗತೊಡಗಿದಳು ಚಂದನಿಕಾ. 'ನಶ್ಯಕ್ಕೂ ಇಲ್ಲ!' ಅವನೂ ಅವಳೊಂದಿಗೆ ನಗತೊಡಗಿದ.

ಮುಂದೆ ಹೆಜ್ಜೆಯಿಡುವಾಗ ಆನಂದನ ಟ್ರ್ಯಾಕ್ ಸೂಟಿನತ್ತ ಅವಳ ದೃಷ್ಟಿ ಹೋಯಿತು. 'ಇರಿ' ಅಂತ ಅವನನ್ನ ಕೈಯಿಂದ ತಡೆದಳು. ಅವಳು ಕುಕ್ಕುರುಗಾಲಲ್ಲಿ ಕುಳಿತು ಕರಡದ ಬೀಜಗಳನ್ನು ಶ್ರದ್ಧೆಯಿಂದ ಕೀಳುವುದನ್ನು ನೋಡಿದ. ಎದೆಯಲ್ಲೇನೊ ಹಿತವಾದ್ದು ಚುಳುಕ್ಕೆಂದಿತು. ಎಲ್ಲಾ ಕಿತ್ತಾದ ಮೇಲೆ ಎದ್ದಳು. ಅವಳ ಸೀರೆಗೆ ಅಂಟಿದೆಯ ಅಂತ ನೋಡಿದ. ಒಂದೂ ಇರಲಿಲ್ಲ. ದಂಡೆಗುಂಟ ಹೆಜ್ಜೆ ಹಾಕಿದರು. ಅಲ್ಲಿ ತುಸು ಆಳದ ಕಣಿವೆಯಂತ ಜಾಗ ತೋರಿಸಿದ. ನದಿಯಿಂದ ಎಡಕ್ಕೆ ಸಾಗುವ ಕಾಲುವೆಯಂತದಿತ್ತು. ಅಂಚೆಲ್ಲ ಕುಸಿದು, ದೊಡ್ಡ ಕೊರಕಲಂತೆ ಕಾಣುವ ಅದು, ಏರಿಯವರೆಗೆ ಹೋಗಿ ಆಮೇಲೆ ಅದರ ಬುಡವನ್ನನುಸರಿಸಿ ಮುಂದುವರಿದು ಹೋಗಿತ್ತು. ಅದು ಒಂದು ಕಾಲದಲ್ಲಿ ಇದ್ದಿರಬಹುದಾದ ಕೋಟೆಯನ್ನು ರಕ್ಷಣೆಯಾಗಿ ಸುತ್ತುವರಿದಿತ್ತು. ಈಗಲೂ ಮಳೆಗಾಲದಲ್ಲಿ ಇದರಲ್ಲಿ ನೀರು ಹರಿಯುತ್ತದೆ ಅಂತ ವಿವರಿಸಿದ ಆನಂದ.

***

ಇವರು ಮನೆಗೆ ಮರಳಿ ಬಂದ ಹತ್ತು ನಿಮಿಷಕ್ಕೆ ನಾಯ್ಡು ಬಂದ. ನಿನ್ನೆ ಹೇಳಿದ ಜಾಗೆಗೆ ಹೋಗೋಣವ ಅಂತ ಕೇಳಿದ. ತಾವಾಗಲೆ ಹೋಗಿಬಂದ ವಿಷಯ ಹೇಳಲಿಲ್ಲ. ನಾಯ್ಡು ಮತ್ತು ಗೋಪಾಲ ರಾವ್‌ರನ್ನು ಕರೆದುಕೊಂಡು ಮತ್ತೆ ಅಲ್ಲಿಗೆ ಹೋದ ಆನಂದ. ಅಲ್ಲಿಯ ವಾತಾವರಣ ನೋಡಿ ಕುಣಿಯುವಂತಾಗಿತ್ತು ನಾಯ್ಡುಗೆ. ಇಪ್ಪತ್ತೊಂದನೆ ಶತಮಾನವನ್ನು ಮರೆಮಾಚಿ ಎರಡು ಶತಮಾನ ಹಿಂದಿನ ಚಿತ್ರಣವನ್ನು ಸೆರೆಹಿಡಿಯಲು ಹಲವು ಕಡೆಗಳಲ್ಲಿ ಸಾಧ್ಯವಿತ್ತು ಅಲ್ಲಿ. ಭರಭರನೆ ಅತ್ತಿಂದಿತ್ತ ಓಡಾಡುತ್ತ ಏನೇನೊ ಟಿಪ್ಪಣಿ ಮಾಡಿಕೊಳ್ಳುತ್ತಿದ್ದ. ನೀರಂಚಿಗೆ ನಿಂತು ಆಚೆದಡ ವೀಕ್ಷಿಸಿದ. ಕರ್ಮದೇವರ ಗುಡಿಯೆದುರು ಕುಳಿತು ಸುತ್ತಮುತ್ತ, ಎಡ ಬಲ ಎಲ್ಲ ಕಣ್ಣಲ್ಲೆ ಅಳೆಯುತ್ತ ತನ್ನಿರುವನ್ನೆ ಮರೆತವನ ತತ್ಪರತೆಯನ್ನು ಮೆಚ್ಚಿದ ಆನಂದ. 'ಪಾಳಯಗಾರನ ಕಡೆಯೋರು ಆ ಉಕ್ಕಡದಲ್ಲಿ ಹರಿಗೋಲು ನಿಲ್ಲಿಸ್ತಾರೆ' ಅಂದವ '...ಆ ಪೊದೆಗಳ ಮರೇಲಿ ಸಾಗಿ, ಆ ಕಣಿವೆಗಿಳಿದು ಅಡಗಿಕೊಂಡು ಹೋಗುತಾರೆ' ಅನ್ನುತ್ತಾ ಆ ಕಡೆ ಕೈಯಾಡಿಸತೊಡಗಿದ. ಕಥೆಯ ಕಲ್ಪನೆಯಲ್ಲಿ ಮುಳುಗಿ ತನಗೆ ತಾನೆ ಮಾತಾಡಿಕೊಳ್ಳುತ್ತಿದ್ದಾನೆ ಅನ್ನುವುದು ಅರ್ಥವಾಯಿತು ಆನಂದನಿಗೆ. ಅವನು ಉಕ್ಕಡ ಅಂತ ಗುರುತಿಸಿದ್ದು, ನದಿಗೆ ಸೇತುವೆಯಾಗುವ ಮೊದಲು ನಿಜಕ್ಕೂ ದೋಣಿ ಹೊರಡುವ ಜಾಗವಾಗಿತ್ತು. ಕಲ್ಪನೆ ಸಹ ಹೇಗೆ ಸಹಜವೆನಿಸುವುದನ್ನು ಗುರುತಿಸಿ ತರುತ್ತದೆ ಅಂತ ಅಚ್ಚರಿಪಟ್ಟ. ಸುಮಾರು ಒಂದು ತಾಸು ಅಲ್ಲೆಲ್ಲ ಓಡಾಡಿ ಗುರುತಿಸಿಕೊಂಡವ ಇನ್ನು ಮರಳಿ ಹೋಗೋಣ ಅಂದ. ಓಮ್ನಿಯಲ್ಲಿ ಶುರುಮಾಡಿದ: 'ಗೋಪಾಲ್ ನಿಮಗೀಗ ಐಡಿಯಾ ಬಂತಲ್ಲ? ಆ ಕರ್ಮದೇವರಗುಡಿಯಿಂದ ಸುರಂಗ ಮಾರ್ಗ ಆನಂದ ಅವರ ಮನೆ ಅಂದ್ರೆ ರಾಜಕುಮಾರೀನ ಇಟ್ಟಿರೊ ಮನೇಲಿ ಗುಪ್ತವಾಗಿ ತೆರೆದುಕೊಳ್ಳುತ್ತೆ. ಆ ಕಡೆ ಪಾಳಯಗಾರ ಬ್ರಿಟಿಷರ ಸಹಾಯ ಪಡೆದುಕೊಂಡು ಹುಡುಕೊ ಪ್ರಯತ್ನ ಮಾಡತಾನೆ. ನದಿಯ ಉಕ್ಕಡದಲ್ಲಿ ದೋಣಿ ಅಥವಾ ಹರಿಗೋಲಲ್ಲಿ ಬಂದ ರಾಜಕುಮಾರಿ ಆಪ್ತರು, ಸುರಂಗ ಮೂಲಕ ಅವಳಿಗೆ ಸೂಚನೆ ನೀಡುತ್ತಿರುತಾರೆ. ಕಥೆ ಸಂಭಾಷಣೆ ತಯಾರು ಮಾಡಿ' ಅಂದ.

'ಅಲ್ಲಾ ಸಾರ್, ಎಲ್ಲೆಲ್ಲೊ ಹೊರಟ್ಹೋಗುತ್ತಲ್ಲ. ಮೂಲಕಥೆಗೆ ಹೇಗೆ ಆಮೇಲೆ ಸಂಬಂಧ ಕಲ್ಪಿಸೋದು?'

'ಧಾರಾವಾಹೀಲಿ ಹೀಗಾಗುತ್ತೆ. ಕಥಾಹಂದರ ಬಳ್ಳಿ ತರ ಅನೇಕ ಕುಡಿಯೊಡೆದು ಕೊಳ್ಳುತ್ತೆ. ಇದೇ ಥರ ಒಂದುಕಡೆ ಲಿಂಕ್ ಕೊಡೋಣ. ವೀಕ್ಷಕರ ಮೆಚ್ಚುಗೆ ಸಿಕ್ಕಾಪಟ್ಟೆ ಹೆಚ್ಚತಿದೇರಿ! ಇಂತಾ ಲೊಕೇಶನ್ ಬಿಡತಾರೇನ್ರಿ?'

'...ಈ ಹೊಸ ಪಾತ್ರಗಳಿಗೆ ಜನ ಬೇಕಾಯ್ತು' ಪ್ರಶ್ನೆ ಮುಂದಿಟ್ಟ ಗೋಪಾಲ ರಾವ್.

ಈ ಸಂಗತಿ ನಾಯ್ಡುನ ಚಿತ್ತದಲ್ಲಿ ಮಥಿಸತೊಡಗಿತು. ಅದು ವ್ಯವಸ್ಥೆಯಾಗಲೇ ಬೇಕಿತ್ತು.

ಮನೆಯೆದುರು ಓಮ್ನಿಯಿಂದಿಳಿದವರನ್ನು ಚಂದನಿಕಾ ಇರುವ ಮನೆಯ ಹೊರಕೋಣೆಗೆ ಕರೆದೊಯ್ದ ನಾಯ್ಡು 'ಆ ಗುಡಿಯೆದುರು ರಾಜಕುಮಾರಿಯ ಹಿತೈಶಿ ಮಂತ್ರಿ ಕುಳಿತಿರುತ್ತಾನೆ. ಆತ ತೇಜಸ್ವಿಯಾಗಿರಬೇಕು, ನೋಡಿದ ತಕ್ಷಣ ಗೌರವ ಹುಟ್ಟುವಂತಿರಬೇಕು...' ಅಂದವ ಕೈ ಹೊಸೆದುಕೊಳ್ಳುತ್ತ 'ಹೆಚ್ಚು ಉದ್ದದ್ದಲ್ಲದ ಗೌರವದ ಪಾತ್ರ; ಎರಡು ಎಪಿಸೋಡುಗಳಲ್ಲಿ ಬರಬಹುದು. ದೇಶ್ಪಾಂಡೆಯವರು ಒಪ್ಪಿದ್ದರೇ...' ಅಂದ ತಗ್ಗಿದ ದನಿಯಲ್ಲಿ. ಕೆಲವು ನಿರ್ದೇಶಕರು ಸಮಾಜದಲ್ಲಿ ಗಣ್ಯರೆಂದು ಗುರುತಿಸಿಕೊಂಡವರನ್ನು, ತಮ್ಮ ಧಾರಾವಾಹಿಯ ಗೌರವಾನ್ವಿತ, ಚಿಕ್ಕ ಪಾತ್ರಗಳಿಗೆ ಆಮಂತ್ರಿಸಿ ತಮ್ಮ ಸದ್ಭಾವನೆ ತೋರಿಸುವ ರೂಢಿ ಮಾಡಿದ್ದರು. 'ಅಜ್ಜನಾ!' ಉದ್ಗರಿಸಿದ ಆನಂದ. 'ತಪ್ಪಿ ಸಹ ಅವರೆದುರು ಈ ಪ್ರಸ್ತಾಪ ಮಾಡಬೇಡಿ. ಇದು ಸಾಧ್ಯವಿಲ್ಲದ ಮಾತು' ಅಂದ.

***

ಆನಂದ ಬೆಳಗಿಂದ ಗದ್ದೆಯಲ್ಲಿಯೆ ಇದ್ದ. ಮೊನ್ನೆಯವರೆಗೂ ಗದ್ದೆ ಕೊಯ್ಯುವುದಾಗಿತ್ತು. ಇವತ್ತು ಬೆಳಗಿಂದ ಒಕ್ಕುವುದು ಶುರುವಾಗಿತ್ತು. ಬೆಳಗ್ಗೆ ಚಂದನಿಕಾಗೆ ಶೂಟಿಂಗಿತ್ತು. ಮಧ್ಯಾಹ್ನ ಊಟಕ್ಕೆ ಅಂತ ಬಂದ ಆನಂದ ಉಂಡ ತಕ್ಷಣ ಹೋಗಿದ್ದ. ಅಲ್ಲದೆ ಬಿಸಿಲೂ ಇತ್ತು. ಮೂರು ಗಂಟೆ ಹೊತ್ತಿಗೆ ಬಂದವ ಚಹಾ ಕುಡಿದು ಹೊರಟ. ಕೆಲಸದವರಿಗೆ ಅಂತ ಮಾಡಿಸಿದ ಚಹದ ಕ್ಯಾನು ಮತ್ತು ಅವಲಕ್ಕಿಯನ್ನು ಸಂಗಡ ಬಂದ ಕೆಲಸದವನೊಬ್ಬ ಹೊತ್ತುಕೊಂಡು ಮುಂದೆ ಹೋಗಿದ್ದ. ಈಗ ಬಿಸಿಲು ಇಳಿಮುಖವಾಗಿತ್ತು. ಅವಳು ತಾನೂ ಬರಲ ಅಂತ ಕೇಳಿದಾಗ ಒಂದು ಕ್ಷಣ ಅನುಮಾನಿಸಿದ. ಅನಂತರ ಕರೆದುಕೊಂಡು ಹೊರಟ. ಅದೇ ಕಾಲುದಾರಿಯಲ್ಲಿ ಹೋಗಿ ಹೊಳೆ ದಾಟಿ ಗದ್ದೆಗೆ ಬಂದರು. ಮೂರು ಕಡೆ ಒಕ್ಕುವ ಕೆಲಸ ಸಾಗಿತ್ತು. ಸಗಣಿ ತೊಡೆದು, ಮಟ್ಟಸ ಮಾಡಿದ ಕಣದಲ್ಲಿ ಮರದ ಹೊಡೆಮಂಚವನ್ನಿಡಲಾಗಿತ್ತು. ಅದರ ಮೇಲೆ ಭತ್ತದ ಕಟ್ಟನ್ನು ಎರಡೂ ಕೈಯಲ್ಲಿ ಹಿಡಿದೆತ್ತಿ ಒಬ್ಬ ಅಪ್ಪಳಿಸುತ್ತಿದ್ದ. ಕಾಳುಗಳು ಜರಜರನೆ ಉದುರುತ್ತ ಮಂಚದಡಿ ರಾಶಿಯಾಗುತ್ತಿತ್ತು. ಬಡಿಯುವವನಿಗೆ ಗದ್ದೆಯಲ್ಲಿ ಕೊಯ್ದು ಒಣಹಾಕಿದ ಕಟ್ಟುಗಳನ್ನು ತಂದು ಕೊಡುತ್ತಲೇ ಇರುವುದಕ್ಕೆ ಬೇರೆ ಜನರಿದ್ದರು. ಈ ರೀತಿ ಮೂರು ಕಡೆಗಳಲ್ಲಿ ವ್ಯವಸ್ಥೆಯಾಗಿತ್ತು. ಬಿಳಿಹುಲ್ಲನ್ನು ಹೊದೆಸಿ, ನೀರು ತಿಂಡಿಗಳನ್ನಿಡಲು ಮಾಡಿದ ತಾತ್ಕಾಲಿಕ ಚಪ್ಪರಕ್ಕೆ ಅವಳನ್ನು ಕರೆದೊಯ್ದ. ಅಲ್ಲೂ ಬಿಸಿಲು ಹುಲ್ಲ ಸಂದಿನಿಂದ ಕಡ್ಡಿಗಳಾಗಿ ಕೆಳಗಿಳಿಯುತ್ತಿತ್ತು. ಸಿನಿಮಾ ನಾಯಕಿಯೊಬ್ಬಳು ಯಜಮಾನರ ಮನೆಯಲ್ಲಿ ಇದ್ದಾಳೆ ಎಂಬ ವಿಷಯ ಸುತ್ತಮುತ್ತಲೆಲ್ಲ ಗೊತ್ತಿತ್ತು. ಕೆಲಸದ ನಡುವೆ ಆಳುಗಳ ಕಣ್ಣುಗಳು ಆಗಾಗ ಅದ್ಭುತವನ್ನು ನೋಡುವಂತೆ ಅವಳತ್ತ ಹರಿಯತೊಡಗಿತು.

**(ಸಶೇಷ)**